ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಶ್ವವಾಣಿ

ದಿನಾಂಕ : DATE : 12/07/2019



ರಾಜೀನಾಮೆ ಪತ್ರ ನೀಡಲು ಬಸ್ ಇಳಿದ ಕ್ಷಣಾರ್ಧದಲ್ಲಿ ಸ್ಪೀಕರ್ ಕಚೇರಿಯತ್ತ ಓಡಿ ಹೋದ ಶಾಸಕ ಭೈರತಿ ಬಸವರಾಜ್.

# ರಾಜೀನಾಮೆ ಅಂಗೀಕಾರದ ಬಗ್ಗೆ ಯೋಚಿಸಿ ತೀರ್ಮಾನ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜೀನಾಮೆ ನೀಡಿರುವ ಶಾಸಕರ ವಿಚಾರದಲ್ಲಿ ಗುರುವಾರದ ಅಂತ್ಯದಲ್ಲಿ ಏನಾದರೂ ತೀರ್ಮಾನ ಮಾಡಬೇಕೆಂದು ಸುಪ್ರೀಂ ಸೂಚನೆ ನೀಡಿದ್ದರೂ, ಸಭಾಧ್ಯಕ್ಷ ರಮೇಶ್ ಕುಮಾರ್, ರಾಜೀನಾಮೆ ಅಂಗೀಕರಿಸುವ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ ಎನ್ನುವ ಹೊಸ ಗೊಂದಲಕ್ಕೆ ನಾಂದಿ ಹಾಡಿದ್ದಾರೆ.



ಅತೃಪ್ತ ಶಾಸಕರ ರಾಜೀನಾಮೆ ವಿಚಾರಣೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗ ರಾಜೀನಾಮೆ ಕೊಟ್ಟ 10 ಶಾಸಕರ ಬಗ್ಗೆ ಇನ್ನೂ ನಿರ್ಧಾರ ಆಗಿಲ್ಲ. ಈ ಬಗ್ಗೆ ಯೋಚನೆ ಮಾಡಿ ನಿರ್ಧಾರ ಕೈಗೊಳ್ಳುತ್ತೇನೆ. ರಾಜೀನಾಮೆಯ ಪಾರದರ್ಶಕತೆ ಕುರಿತು ನನಗೆ ಮನವರಿಕೆ ಆದ ಬಳಿಕವೇ ಈ ಬಗ್ಗೆ ಒಂದು ತೀರ್ಮಾನಕ್ಕೆ ಬರುತ್ತೇನೆ ಎಂದು ಹೇಳಿದರು.

ಶಾಸಕರ ರಾಜೀನಾಮೆಯನ್ನು ನಿಗದಿಪಡಿಸಿರುವ ದಿನಾಂಕದಂದೇ ಕೂಲಂಕಷವಾಗಿ ಪರಿಶೀಲಿಸಿ ಅಂತಿಮ ನಿರ್ಧಾರಕ್ಕೆ ಬರಲಾಗುವುದು. ಶಾಸಕರ ರಾಜೀನಾಮೆ ಸ್ವ ಇಚ್ಛೆಯಿಂದಲೋ, ಸ್ವಯಂ ಪ್ರೇರಣೆಯೋ ಗೊತ್ತಾಗಬೇಕಿದೆ. ಸುಪ್ರೀಂ ಕೋರ್ಟ್ ಯಾವುದಾದರೂ ಒಂದು ತೀರ್ಮಾನ ಮಾಡಲು ಹೇಳಿದೆ.

→ 5

## ಸಮರ್ಥನೆ

ನಾನಿಲ್ಲದ ಸಮಯದಲ್ಲಿ ಕಚೇರಿಗೆ ರಾಜೀನಾಮೆ ಪತ್ರ ತಲುಪಿಸಿದ್ದಾರೆ. ನಾನು ಆ ವೇಳೆ ಬೇರೆಡೆ ಹೋಗಿದ್ದೆ. ರಾಜೀನಾಮೆ ಸಲ್ಲಿಸಲು ಬರುತ್ತಿದ್ದೇನೆ ಎಂದು ನನಗೆ ಮೌಖಿಕವಾಗಿ, ಲಿಖಿತವಾಗಿ ಶಾಸಕರು ಮಾಹಿತಿ ನೀಡಿರಲಿಲ್ಲ. ಅದರ ನಂತರ ಭಾನುವಾರ. ಅಂದು ರಜೆ. ಸೋಮವಾರ ಕಚೇರಿಗೆ ನಾನು ಬರಲು ಸಾಧ್ಯವಾಗಲಿಲ್ಲ, ಎಂದು ವಿವರಣೆ ನೀಡಿದರು. ಮಂಗಳವಾರ ಕಚೇರಿಗೆ ಬಂದ ನಂತರ, ಕರ್ನಾಟಕ ವಿಧಾನಸಭೆಯ ನಿಯಮಾವಳಿಯನ್ನು ನೋಡಿದೆ. ನಮ್ಮ ಕಚೇರಿಗೆ ತಲುಪಿದ 13 ರಾಜೀನಾಮೆಗಳಲ್ಲಿ 8 ರಾಜೀನಾಮೆ ಪತ್ರ ವಿಧಾನಸಭೆಯ ನಿಯಮ ನಡಾವಳಿ 202ರ ಪ್ರಕಾರ ಕ್ರಮಬದ್ಧವಾಗಿರಲಿಲ್ಲ. ಉಳಿದ ಐವರ ರಾಜೀನಾಮೆ ಕ್ರಮಬದ್ಧವಾಗಿದ್ದವು. ಸಂವಿಧಾನದ 190ರ ಪ್ರಕಾರ, ನಾನು ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮನವರಿಕೆ ಮಾಡಿಕೊಳ್ಳುವ ಹೊಣೆ ನನ್ನ ಮೇಲಿದೆ ಎಂದರು.

6

# ರಾಜೀನಾಮೆ ಅಂಗೀಕಾರದ ಬಗ್ಗೆ ಯೋಚಿಸಿ ತೀರ್ಮಾನ

← ಮೊದಲಪುಟದಿಂದ

ಶಾಸಕರ ರಾಜೀನಾಮೆ ವಿಚಾರದಲ್ಲಿ ತೆಗೆದುಕೊಳ್ಳುವ ನಿರ್ಧಾರವನ್ನು ಸುಪ್ರೀಂಗೆ ತಿಳಿಸುತ್ತೇನೆ. ಜತೆಗೆ ಇಂದಿನ ಎಲ್ಲ ಘಟನಾವಳಿಗಳನ್ನು ವಿಡಿಯೋ ರೆಕಾರ್ಡ್ ಮಾಡಿದ್ದೇನೆ. [illegible] ಒಪ್ಪಿಸುತ್ತೇನೆ ಎಂದು ಸ್ಪಷ್ಟಪಡಿಸಿದರು.

**ಮಿಂಚಿನ ವೇಗದಲ್ಲಿ ಮಾಡಲು ಸಾಧ್ಯವಿಲ್ಲ:** ರಾಜೀನಾಮೆಯನ್ನು ಮಿಂಚಿನ ವೇಗದಲ್ಲಿ ಅಂಗಿಕರಿಸಲು ಆಗಲ್ಲ. ನಿಯಮ ಮತ್ತು ಸಂವಿಧಾನವನ್ನು ಬಿಟ್ಟು ನಾನು ಹಿಂದೆ ಸರಿಯುವುದಿಲ್ಲ. ಸಂವಿಧಾನದ ಕಲಂ 190ರ ಪ್ರಕಾರ ಕ್ರಮಬದ್ಧವಾಗಿ ರಾಜೀನಾಮೆ ಸಲ್ಲಿಸಿದ್ದಾರೆ. ಆದರೆ ಈಗಿಂದೀಗಲೇ ರಾಜೀನಾಮೆ ಅಂಗೀಕರಿಸಬೇಕು ಎಂದರೆ ಸಾಧ್ಯವಿಲ್ಲ ಎಂದು ತಮ್ಮ ಹಿಂದಿನ ನಿಲುವಿಗೆ ಅಂಟಿಕೊಂಡರು.

ಇಲ್ಲಿರುವ ಕೆಲವರು ನಮ್ಮನ್ನು ಬೆದರಿಸುತ್ತಿದ್ದಾರೆ ಎಂದು ಕೆಲ ಶಾಸಕರು ನನಗೆ ತಿಳಿಸಿದ್ದಾರೆ. ಹಾಗೇನಾದರೂ ಇದ್ದಿದ್ದರೆ ಅವರು ನನಗೆ ತಿಳಿಸಬಹುದಿತ್ತು. ಅವರಿಗೆ ನಾನೇ ರಕ್ಷಣೆ ಕೊಡಿಸುತ್ತಿದೆ. ಇದನ್ನೇ ಅವರಿಗೂ ಹೇಳಿದ್ದೇನೆ. ಅವರು ರಾಜೀನಾಮೆ ಕೊಟ್ಟು ಮಂಗಳವಾರಕ್ಕೆ ಮೂರು ದಿನವಾಗಿತ್ತಷ್ಟೇ. ಅಷ್ಟಕ್ಕೇ ಭೂಕಂಪವಾದಂತೆ ವರ್ತಿಸುತ್ತಿದ್ದಾರೆ.

ಬೇರೆ ರಾಜ್ಯಗಳಲ್ಲಿ ವರ್ಷಗಟ್ಟಲೇ ರಾಜೀನಾಮೆ ಅಂಗೀಕರಿಸದೇ ಉಳಿಸಿಕೊಂಡ ಉದಾಹರಣೆಗಳೂ ಈ ದೇಶದಲ್ಲಿವೆ ಎಂದರು.

ಇಡೀ ಪ್ರಕ್ರಿಯೆಯಲ್ಲಿ ಯಾರನ್ನು ಉಳಿಸುವುದು ಅಥವಾ ಕಳಿಸುವುದು ನನ್ನ ಕೆಲಸವಲ್ಲ. ನಾನು ಅದಕ್ಕೆ ಎಂದೂ ಕೈಹಾಕುವುದಿಲ್ಲ, ಕಾನೂನಿನ ಪರಿಧಿಯಲ್ಲಿ ಕೆಲಸ ಮಾಡುತ್ತೇನೆ. 40
ವರ್ಷದ ಸಾರ್ವಜನಿಕ ಜೀವನದ
ಮರ್ಯಾದೆಯಿಂದ ಬದುಕಿದ್ದೇನೆ. ಬೆಳಗ್ಗೆ ಕ
ಪತ್ರಿಕೆ ನೋಡಿದಾಗ ನನ್ನ ಮನಸ್ಸಿಗೆ ನೋವಾಯಿತ
ಎಂದು ತಮ್ಮ ನೋವು ಹೊರ ಹಾಕಿದರು.

ಇಂದಿನ ರಾಜ ರಾಜಕೀಯ ಸ್ಥಿತಿ
ರಾಜೀನಾಮೆ ಸ್ವಯಂ ಪ್ರೇರಿತವಾ
ಎಂಬುದನ್ನು ನಿರ್ಧರಿಸುವುದು ಸಾರ್ವಜನಿಕ
ಬಿಡುತ್ತೇನೆ. ಆದರೆ ನನ್ನ ಜವಾಬ್ದಾರಿಗಳ ಪ್ರಕ
ನಾನು ತನಿಖೆ ಮಾಡಬೇಕಾಗುತ್ತದೆ. ರಾಜ
ಜನರ ಹಂಗಿನ ಮೇಲೆ ನಾನು ಬದುಕುತ್ತ
ಸಂವಿಧಾನದ ಆಶಯದ ಮೇಲಿನ ಹಂಗಿನ ಮೆ
ನಾನು ಬದುಕುತ್ತೇನೆ. ಇದನ್ನು ಹೊರತುಪ
ಇನ್ಯಾರ ಹಂಗಲ್ಲೂ ನಾನಿಲ್ಲ ಎಂದರು.

**ಅಸಮಾಧಾನ:** ರಾಜೀನಾಮೆ ನೀಡಿ
ಶಾಸಕರು ಸಭಾಧ್ಯಕ್ಷರನ್ನು ಭೇಟಿ ಮಾ
ಸುಪ್ರೀಂ ಕೋರ್ಟ್ ಅವಶ್ಯಕತೆ ಇ
ಕರ್ನಾಟಕದಲ್ಲಿರುವವರು ಸಮಯ ನ
ಬಂದು ಭೇಟಿ ಆಗುವ ಬದಲು, ಮುಂ
ಹೋಗಿ ಕೂತು ನಂತರ ಸುಪ್ರೀಂ ಕೋರ್ಟ್
ಹೋಗಿದ್ದು ಸರಿಯೇ? ನನಗೆ ಮಾಹಿತಿ
ಬಂದು ಭೇಟಿ ಮಾಡಬೇಕಿತ್ತು. ಅವರೇ ಬ
ನನ್ನ ಮೇಲೆ ಆರೋಪ ಮಾಡುವುದು ಎಷ
ಎಂದು ಅತೃಪ್ತ ಶಾಸಕರ ವಿರುದ್ಧ ರಮ
ಕುಮಾರ್ ಅಸಮಾಧಾನ ಹೊರಹಾಕಿ
ಇಷ್ಟೆಲ್ಲಾ ಪೊಲೀಸ್ ಭದ್ರತೆಯಲ್ಲಿ
ರಾಜೀನಾಮೆ ನೀಡಬೇಕಿತ್ತೇ. ಸುಪ್ರೀಂಕ
ನಿಂದ ರಕ್ಷಣೆ ಬಯಸಬೇಕಿತ್ತಾ. ಅವರು ನೇ
ನನ್ನನ್ನೇ ಬಂದು ಭೇಟಿಯಾಗಿದ್ದರೆ, ನಾನೇ
ಬೇಕಾದ ರಕ್ಷಣೆ ಒದಗಿಸುತ್ತಿದ್ದೆ. ಅದನ್ನು
ಇವರು ಮುಂಬೈಗೆ ಹೋದರು ಎಂದು
ವ್ಯಕ್ತಪಡಿಸಿದರು.